# ***ಇಂಡಿಯನ್ ಎನ್ಸಂಬಲ್ ವತಿಯಿಂದ ಐಡಿಯಾ ಲ್ಯಾಬ್***

- ಏನು ಇದರ ಉದ್ದೇಶ?

  ಅನುಭವಿ ಮತ್ತು ಯುವ ರಂಗಕರ್ಮಿಗಳಲ್ಲಿರುವ ಸೃಜನಾತ್ಮಕ ಆಲೋಚನೆಗಳನ್ನು ಬೆಳೆಸಲು ಬೇಕಾದಂತಹ ಅಭ್ಯಾಸ ಮತ್ತು ಅನ್ವೇಷಣಗಳನ್ನು ಪೂರಕಗೊಳಿಸಲು ಒಂದು ಉತ್ತಮ ವೇದಿಕೆ.

- ಯಾರು ಯಾರು ಇದರ ಲಾಭ ಪಡೆಯಬಹುದು?

  ನಿರ್ದೇಶನ, ನಾಟಕ ರಚನೆ, ಡ್ರಾಮಟರ್ಜಿ, ಅಭಿನಯ - ಈ ಮೇಲಿನ ವಿಷಯಗಳ ಬಗ್ಗೆ ಆಸಕ್ತಿ ಇರುವವರಿಗೆ ಇದೊಂದು ಉತ್ತಮ ಅವಕಾಶ.

  ಈಗಾಗಲೇ ರಚನೆಗೊಂಡಿರುವ ನಾಟಕಗಳಿದ್ದು, ಅದರಲ್ಲಿ ಕೆಲವು ಬದಲಾವಣೆಗಳು ಬೇಕಿದ್ದರೆ  ಅಥವಾ ಅದಕ್ಕೆ ಹೊಸ ಆಯಾಮವನ್ನು ಕೊಡುವ ಆಲೋಚನೆಗಳಿದ್ದರೆ, ಅದಕ್ಕೆ  ಬೇಕಾಗುವ ಎಲ್ಲ ಅಭ್ಯಾಸದ ಸೌಲಭ್ಯಗಳನ್ನು ಇಲ್ಲಿ ಪಡೆದುಕೊಳ್ಳಬಹುದು.

  ನಿಮ್ಮ ಯೋಚನೆಯಲ್ಲಿ ಒಂದು ವಿಷಯ ಇರಬಹುದು (ಸಾಮಾಜಿಕ ಅಥವಾ ರಾಜಕೀಯ); ನಾಟಕದ ಒಂದು ದೃಶ್ಯ ಬರೆದು ನಂತರ ಏನೂ ಹೊಳೆಯದೆ ನಿಂತಿರಬಹುದು; ಪ್ರದರ್ಶನದ ಒಂದು ತುಂಡು ಆಲೋಚನೆಯಲ್ಲಿ ಇರಬಹುದು, ಆ ಆಲೋಚೆನಗಳನ್ನು ಆಭಿವೃದ್ಧಿ ಪಡಿಸಿ  ಅದಕ್ಕೆ ಪೂರ್ಣರೂಪ ಕೊಡಲು ಮಾಡಬೇಕಾದ ತಯಾರಿಯನ್ನು ಪಡೆದುಕೊಳ್ಳಬಹುದು.

  ಒಂದು ಹೊಸ  ಐಡಿಯಾವನ್ನು ಹೊತ್ತು ಬಂದಂತಹ ತಂಡ ನಂತರ ಆ ಐಡಿಯಾವನ್ನು ಬೆಳೆಸಲಾಗದೆ ಗೊಂದಲದಲ್ಲಿ ಇದ್ದರೆ, ಅದನ್ನು ಮುಂದುವರೆಸಲು ಪೂರಕವಾದ ವಾತಾವರಣವನ್ನು ನಿರ್ಮಿಸಲಾಗುವುದು.
  *(ಒಂದು ಗುಂಪಿನಿಂದ ಗರಿಷ್ಠ ಇಬ್ಬರು ಆಸಕ್ತರು ಮಾತ್ರ ಅರ್ಜಿ ಸಲ್ಲಿಸಬೇಕು)

- ಈ ಲ್ಯಾಬಿನಿಂದ ನೀವು ಏನನ್ನು ನಿರೀಕ್ಷಿಸಬಹುದು?

  ಬೇರೆಬೇರ ಉಪನ್ಯಾಸಗಳ ಪ್ರಸ್ತುತಿ, ಗುಂಪುಚರ್ಚೆ, ಓದುವುದು, ಪ್ರಾಯೋಗಿಕ ನಿಯೋಜನೆಗಳು.

  ಗುಂಪಿನಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯ ಆಲೋಚನೆಗಳನ್ನು ಬೆಳೆಸುವುದರ ಬಗ್ಗೆ ಸಂಪೂರ್ಣವಾಗಿ ಗಮನ ಹರಿಸಲಾಗುವುದು.

  ನಿಮ್ಮ ಆಲೋಚನೆಗೆ ಅನುಗುಣವಾಗಿ ನಾಟಕ ನಿರ್ಮಾಣವಾಗುವುದಕ್ಕೆ ಬೇಕಾದ ತಯಾರಿಗಳ ಬಗ್ಗೆ ಸಹಾಯ ಮಾಡಲಾಗುವುದು.

  ನೀವು ಆಲೋಚಿಸಿದ ವಿಷಯದ ಬಗ್ಗೆ ಸಂಶೋಧನೆ ಮಾಡಲು ಮಾರ್ಗದರ್ಶನ ನೀಡಲಾಗುವುದು.

- ಏನಿದರ ಅವಧಿ?

ಲ್ಯಾಬ್ ಬೆಂಗಳೂರಿನಲ್ಲಿಯೇ ನಡೆಯುತ್ತದೆ. ವಾರಕ್ಕೆ ಮೂರು ಅಧಿವೇಶನಗಳನ್ನು (ಪ್ರತಿ ಅಧಿವೇಶನ ೩ ರಿಂದ ೪ ಗಂಟೆಯ ಅವಧಿಯ ವರೆಗೆ ಇರುತ್ತದೆ) ಏರ್ಪಡಿಸಲಾಗುವುದು. ಕೋವಿಡ್-೧೯ರ ಪರಿಸ್ಥಿತಿಗೆ ತಕ್ಕಂತೆ ಆನ್-ಲೈನ್ ಹಾಗು ಕ್ಲಾಸ್ರೂಮ್ ಸೆಶನ್ ಗಳ ಬಗ್ಗೆ ತೀರ್ಮಾನಿಸಲಾಗುವುದು. ನಿಖರವಾದ ಟೈಮ್ ಟೇಬಲ್ಅನ್ನು ಒಂದು ತಿಂಗಳ ಮುಂಚೆ ಖಚಿತಪಡಿಸಲಾಗುವುದು.

*ಟರ್ಮ್ ೧ - ಸೆಪ್ಟೆಂಬರ್ ಮಧ್ಯದಿಂದ.*
*ಮೊದಲ ಬ್ರೇಕ್ - ಅಕ್ಟೋಬರ್*
*ಟರ್ಮ್ ೨ - ನವೆಂಬರ್*
*ಎರಡನೆಯ ಬ್ರೇಕ್ - ಡಿಸೆಂಬರ್*
*ಟರ್ಮ್ ೩ - ಜನವರಿ-ಫೆಬ್ರವರಿ*
*ಅಂತಿಮ ಪ್ರದರ್ಶನ - ಫೆಬ್ರವರಿ ಮಧ್ಯದಲ್ಲಿ.*

ಬ್ರೇಕ್ ಸಮಯದಲ್ಲಿ ಅಸೈನ್ಮೆಂಟ್ಗಳಿರುತ್ತದೆ. ಅರ್ಜಿ ಸಲ್ಲಿಸುವವರು ೬ ತಿಂಗಳ ಲಭ್ಯತೆಯನ್ನು ಖಚಿತ ಪಡಿಸಬೇಕು.

ಈ ಪ್ರಕ್ರಿಯೆಗೆ ಅನುಗುಣವಾಗಿ ಕೋರ್ಸಿನ ಸಮಯಾವಧಿಯನ್ನು ಬದಲಾಯಿಸಬಹುದು ಈ ಬದಲಾವಣೆಗೆ ನಿಮ್ಮ ಬದ್ಧತೆ ಮುಖ್ಯವಾದುದ್ದು.

ಅರ್ಜಿ ಸಲ್ಲಿಸಲು ಇಚ್ಛಿಸುವವರು ಕೆಳಗಿನ ಫಾರಂ ಅನ್ನು ತುಂಬಿ indianensemble@gmail.com ಕಳುಹಿಸಿ ಅಥವಾ ಈ ಗೂಗಲ್ ಫಾರಂ ಅನ್ನು ತುಂಬಿ - https://forms.gle/Hqje4NyhE5WPBq5p7

**ಇಂಡಿಯನ್ ಎನ್ಸೇಂಬಲ್ ಐಡಿಯಾಸ್ ಲ್ಯಾಬ್**

*ಅವಧಿ - ಸೆಪ್ಟೆಂಬರ್ ೨೦೨೦ ರಿಂದ ಫೆಬ್ರವರಿ ೨೦೨೧*

*ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂನ್ ೨೫, ೨೦೨೦*

1. ಅಭ್ಯರ್ಥಿಯ ಹೆಸರು ಅಥವಾ ತಂಡದ ಹೆಸರು

2. ಮೊಬೈಲ್ ಸಂಖ್ಯೆ

3. ಈ-ಮೇಲ್

4. ಈಗಿನ ವಿಳಾಸ ಅಥವಾ ತಂಡದ ವಿಳಾಸ

5. ದಯವಿಟ್ಟು ನಿಮ್ಮ ರಂಗಭೂಮಿಯ ಅನುಭವ ಅಥವಾ ನೀವು ಯಾವುದಾದರೂ ತಂಡದಲ್ಲಿ ಗುರುತಿಸಿಕೊಂಡಿದ್ದರೆ ಆ ತಂಡದ ವಿವರಗಳನ್ನು ತಿಳಿಸಿ

6. ಈ ಲ್ಯಾಬ್ ಸೇರಿಕೊಳ್ಳಲು ಕಾರಣ? (೨೫೦ ಪದಗಳಲ್ಲಿ)

7. ಈ ಲ್ಯಾಬ್ನಲ್ಲಿ ನೀವು ಕೆಲಸ ಮಾಡುವ ಆಲೋಚನೆ ಅಥವಾ ವಿಷಯದ ಬಗ್ಗೆ ಚಿಕ್ಕ ವಿವರಣೆ ನೀಡಿ

8. ನೀವು ಆರಿಸಿಕೊಂಡ ವಿಷಯದಲ್ಲಿ ಎದರಿಸುತ್ತಿರುವ ಸವಾಲುಗಳ ಬಗ್ಗೆ ಮತ್ತು ಆ ಸವಾಲುಗಳಲ್ಲಿನ ಪರಿಹಾರವನ್ನು ಕಂಡುಕೊಳ್ಳಲು ಲ್ಯಾಬ್ ನಿಮಗೆ ಹೇಗೆ ಸಹಕರಿಸಬಹುದು? (೨೫೦ ಪದಗಳಲ್ಲಿ)

9. ನೀವು ಎದುರಿಸುತ್ತಿರುವ ಸವಾಲುಗಳನ್ನು ಬಗೆಹರಿಸಲು ನಿಮಗೆ ಬೇಕಾದ ಸಲಹೆ, ಸಹಕಾರ ಅಥವಾ ಸಹಾಯದ ಬಗ್ಗೆ ತಿಳಿಸಿ:

10. ಲ್ಯಾಬ್ ನಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡ ನಂತರ ಬೇರೆ ಅಭ್ಯರ್ಥಿಗಳು ನಿಮ್ಮಿಂದ ಯಾವ ರೀತಿಯ ಸಹಾಯವನ್ನು ನಿರೀಕ್ಷಿಸ ಬಹುದು? (ಅಭಿನಯ, ಬರೆಯಲು ಸಹಾಯ)

11. ಇನ್ನೇನಾದರೂ ಕೇಳಬೇಕಾದರೆ:

ಒಮ್ಮೆ ನಿಮ್ಮ ಅರ್ಜಿ ಸ್ವೀಕರಿಸಿದ ಮೇಲೆ ಈ-ಮೇಲ್ ಮುಖಾಂತರ ಕೆಲವು ವಿಷಯಗಳ ಸ್ಪಷ್ಟೀಕರಣ ಬೇಕಾಗಬಹುದು.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಜೂನ್ ೨೫, ೨೦೨೦. ಸ್ವೀಕರಿಸಿದ ಅರ್ಜಿಗಳ ಬಗ್ಗೆ ಜೂಲೈ ೧೫ ರಂದು ತಿಳಿಸಲಾಗುವುದು.

ಅರ್ಜಿ ಸ್ವೀಕರಿಸಿದ ಅಭ್ಯರ್ಥಿಗಳ ಜೊತೆ ಜೂಲೈ ೨೦ ರಿಂದ ೨೫ ರ ಒಳಗೆ ಸಣ್ಣ ಸಂದರ್ಶನ ಒಂದನ್ನು ಏರ್ಪಡಿಸಲಾಗುವುದು. ಲ್ಯಾಬ್ ನ ಸಂಪೂರ್ಣ ಲಾಭವನ್ನು ಪಡೆದುಕೊಳ್ಳುವುದರ ಬಗ್ಗೆ ಸಂವಾದ ನಡೆಸುವುದೇ ಈ ಭೇಟಿಯ ಉದ್ದೇಶ. ಸಂವಾದ ಬೆಂಗಳೂರಿನಲ್ಲಿಯೇ ಇರುತ್ತದೆ ಒಂದು ವೇಳೆ ಬೆಂಗಳೂರಿನಿಂದ ಹೊರಗಿನವರಾಗಿದ್ದರೆ skype ಮುಖಾಂತರ ಸಂವಾದ ನಡೆಸಲಾಗುವುದು.

ಯಾವುದೇ ಪ್ರಶ್ನೆ ಇದ್ದರೆ indianensemble@gmail .comಗೆ ಬರೆಯಿರಿ.